Rotary 2024-25

THE MAGIC OF ROTARY

ಮಿಡ್‌ಟೌನ್ ನ್ಯೂಸ್

# Midtown News

In House Bulletin of Rotary Club Shimoga Mid Town

R.I. President : Rtn. Stephanie A. Urchick
Dist. Governor : Rtn. Dev Anand
Asst. Governor : Rtn. Nagaraj S.R.

President : Rtn. Suresh Kumar D.
Secretary : Rtn. Faheem Hussain

Director : Rtn. Badriprasad T.A.
Editor : Rtn. Meera Nadig
Co-Chairmen : Rtn. Anand I.R.
Members : Rtn. G.N.N. Murthy, Rtn. Faheem Hussain

*We meet on 2nd, 3rd and 4th Thursday at Rotary Mid Town Hall, SHIVAMOGGA-577201* rotaryshimogamidtown@gmail.com

**Vol. 41** **19 - 9 - 2024** **ISSUE 10**

## Basic Education and Literacy Month

### ದಿನಾಂಕ 12-9-2024ರ ವಾರದ ಸಭೆಯ ವರದಿ

ದಿನಾಂಕ 12-9-2024ರ ವಾರದ ಸಭೆಯು ಮೂರನೇ ಕ್ಲಬ್ ಅಫೇರ್ಸ್ ಸಭೆಯಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷರಾದ ರೊ. ಸುರೇಶ್ ಕುಮಾರ್ ಡಿ. ಇವರು ವಹಿಸಿದ್ದರು ಹಾಗೂ ಅವರು ಸಭೆಗೆ ಆಗಮಿಸಿದ್ದ ಎಲ್ಲಾ ರೋಟರಿ ಸದಸ್ಯರನ್ನು ಸ್ವಾಗತಿಸಿದರು.




ರಾಷ್ಟ್ರಗೀತೆಯೊಂದಿಗೆ ಚಾಲನೆ ನೀಡಿದ ಸಭೆಯಲ್ಲಿ ಮೊದಲಿಗೆ ನೂತನ ಸದಸ್ಯರಾದ ರೊ. ರಘುಪತಿ ಎಸ್. ಇವರು EXCHANGE OF CLUB BANNERS ಎಂಬ ವಿಷಯವಾಗಿ ರೋಟರಿ ಮಾಹಿತಿಯನ್ನು ಸಭೆಯಲ್ಲಿ ವಾಚಿಸಿದರು.



ಕಾರ್ಯದರ್ಶಿಗಳಾದ ರೊ. ಫಹೀಂ ಹುಸೇನ್ ಇವರು ದಿನಾಂಕ 4-9-2024ರಂದು ನಡೆದ ಕಾರ್ಯಕಾರಿ ಮಂಡಳಿಯ ವರದಿಯನ್ನು ಓದಿಸಭೆಯ ಅನುಮೋದನೆ ಯನ್ನು ಪಡೆದುಕೊಂಡರು.



ಆಗಸ್ಟ್ ತಿಂಗಳ ಲೆಕ್ಕಪತ್ರದ ವರದಿಯನ್ನು ಖಜಾಂಚಿಗಳಾದ ರೊ. ಡಾ|| ಧರಣಿ ದೇವಾಂಗಿ ಇವರು ಸಭೆಯಲ್ಲಿ ಓದಿ ಸದಸ್ಯರಿಂದ ಅನುಮೋದನೆಯನ್ನು ಪಡೆದುಕೊಂಡರು.

ನಂತರ ಅಧ್ಯಕ್ಷರು ತಮ್ಮ ಪ್ರಕಟಣೆಯಲ್ಲಿ ಮುಂದೆ ನಡೆಸಲಿರುವ ಸ್ಟೇಮ್ ಸೆಲ್ ಯೋಜನೆ ಬಗ್ಗೆ ಮಾಹಿತಿಯನ್ನು ನೀಡಿದರು. ರೋಟರಿ ಫೌಂಡೇಶನ್‌ಗೆ ಒಟ್ಟು 110 ಸದಸ್ಯರ ದೇಣಿಗೆಯನ್ನು ತಲಾ 10 ಡಾಲರ್‌ನಂತೆ ಒಟ್ಟು 1100 ಡಾಲರ್‌ಗಳನ್ನು ಕಳುಹಿಸಲಾಗಿದೆ ಎಂದು ತಿಳಿಸಿದರು.

**2027-28ನೇ ಸಾಲಿಗೆ ರೋಟರಿ ಮಿಡ್‌ಟೌನ್ ಕ್ಲಬ್‌ನಿಂದ ಜಿಲ್ಲಾ ಗೌರ್ನರ್ ಅಭ್ಯರ್ಥಿಯಾಗಿ ರೊ. ರಾಜೇಂದ್ರ ಪ್ರಸಾದ್ ಎಂ.ಆರ್.ರವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಅಧ್ಯಕ್ಷರು ತಿಳಿಸಿದರು. ಇದರ ಹಿನ್ನೆಲೆಯಾಗಿ ಕಾರ್ಯಕಾರಿ ಮಂಡಳಿಯಲ್ಲಿ ನಿರ್ಣಯವನ್ನು ಕೈಗೊಳ್ಳಲಾಯಿತು.**

ಈ ತಿಂಗಳಿನಲ್ಲಿ ಈಗಾಗಲೇ ಮಾಡಿರುವ ಯೋಜನೆಗಳು ಹಾಗೂ ಕಾರ್ಯಕ್ರಮಗಳ ಬಗ್ಗೆ ತಿಳಿಸುತ್ತಾ ಮೊದಲಿಗೆ ಸೆಪ್ಟಂಬರ್ 1 ರಂದು ಜೆಎನ್‌ವಿ ಗಾಜನೂರು ಇಂಟರ್‍ಯಾಕ್ಟ್ ಕ್ಲಬ್ ಸ್ಥಾಪನೆ ಮತ್ತು ಒಂದು ದಿನದ ಕಿರುಪ್ರವಾಸ ಹಾಗೂ ಪ್ರತಿಭಾ ಪುರಸ್ಕಾರ, ಸೆಪ್ಟಂಬರ್ 3 ರಂದು ಕೋಲ್ಕತ್ತಾ ಮಹಿಳೆಯರ ಮೇಲಿನ ಅಪರಾಧದ ವಿರುದ್ಧ ಮೌನ ನಡಿಗೆ, ಸೆಪ್ಟಂಬರ್ 11 ರಂದು ಡಾ. ಸಿ.ಆರ್. ಚಂದ್ರಶೇಖರ್ ಇವರಿಂದ ಆತ್ಮಹತ್ಯೆ ತಡೆಗಟ್ಟುವ ದಿನದಂದು ಆತ್ಮಹತ್ಯೆಯ ನಿರೂಪಣೆಯನ್ನು ಬದಲಾಯಿಸುವುದು, ಸಮುದಾಯವನ್ನು ಸಬಲೀರಣ ಗೊಳಿಸುವುದು ಮತ್ತು ಉತ್ತಮ ಭವಿಷ್ಯಕ್ಕಾಗಿ ಜೀವನ ಕೌಶಲ್ಯಗಳ ಮೇಲೆ ರೋಟರಿ ಹಾಲ್ ಮತ್ತು ಜೆಎನ್‌ಎನ್‌ಸಿ ಕಾಲೇಜಿನಲ್ಲಿ ಉಪನ್ಯಾಸ. ಡಾ. ಸಿ.ಆರ್. ಚಂದ್ರಶೇಖರ್ ಬರೆದ **ವಿದ್ಯಾರ್ಥಿಗಳಿಗಾಗಿ 15 ಕೌಶಲ್ಯಗಳು,** ಎಂಬ 60 ಪುಸ್ತಕಗಳನ್ನು ಖರೀದಿಸಲಾಗಿದೆ. ಇದರಿಂದ ಸಂಗ್ರಹಿಸಿದ ಹಣವು ಅವರ ಸಮಾಧಾನ ಟ್ರಸ್ಟ್ ಎಂಬ ಎನ್.ಜಿ.ಒ. ಗೆ ಹೋಗುತ್ತದೆ ಎಂದು ತಿಳಿಸಿದರು. ಸೆಂಪ್ಟೆಂಬರ್ 19ರ ವಾರದ ಸಭೆಗೆ ಡಯಟ್ ಸಂಸ್ಥೆಯ ಹಿರಿಯ ಉಪನ್ಯಾಸಕರಾದ ಶ್ರೀ ಹರಿಪ್ರಸಾದ್‌ರವರು ಶಿಕ್ಷಣದಲ್ಲಿ ನಾವೀನ್ಯತೆ ಎಂಬ ವಿಷಯವಾಗಿ ಉಪನ್ಯಾಸ ನೀಡಲಿದ್ದಾರೆ ಎಂದು ತಿಳಿಸಿದರು. ಸೆಪ್ಟಂಬರ್ 26ರ ವಾರದ ಸಭೆಯು ಕೌಟುಂಬಿಕ ಸ್ನೇಹ ಮಿಲನ ಇರುವುದಾಗಿ ತಿಳಿಸಿದರು.

ರೋಟರಿ ರಕ್ತನಿಧಿ ಕೇಂದ್ರಕ್ಕೆ ಸುಮಾರು 60 ಲಕ್ಷ ಮೌಲ್ಯದ ಉಪಕರಣಗಳಿಗಾಗಿ ಗ್ಲೋಬಲ್ ಗ್ರಾಂಟ್ ಯೋಜನೆಯ ಬಗ್ಗೆ ಚರ್ಚಿಸಲಾಯಿತು.

ಇಲ್ಲಿಯವರೆಗೆ ನಡೆದ ಎಲ್ಲಾ ರೋಟರಿ ಯೋಜನೆ ಮತ್ತು ಕಾರ್ಯಕ್ರಮಗಳಲ್ಲಿ ಪ್ರತಿ ಶತ 100 ಹಾಜರಾತಿಯೊಂದಿಗೆ ಭಾಗವಹಿಸಿರುವ ನೂತನ ಸದಸ್ಯರಾದ ರೊ. ಶಿಲ್ಪಾ ಹೆಚ್.ಜಿ. ಇವರನ್ನು ವೇದಿಕೆಗೆ ಆಹ್ವಾನಿಸಿ ಗೌರವಿಸಲಾಯಿತು.







ರೊ. ಡಾ|| ಹರೀಶ್ ಮತ್ತು ರೊ. ರವೀಂದ್ರಕುಮಾರ್ ಕೆ. ಇವರು ಇಂದಿನ ಸಭೆಯ ಹಾಜರಾತಿ ಬಹುಮಾನಕ್ಕೆ ಪಾತ್ರರಾದರು. ಕೊನೆಯಲ್ಲಿ ಕಾರ್ಯದರ್ಶಿಗಳಾದ ರೊ. ಫಹೀಂ ಹುಸೇನ್ ಇವರು ವಂದನಾರ್ಪಣೆಯನ್ನು ನೆರವೇರಿಸಿದರು.

## ವಾರದ ಸಭೆ

ದಿನಾಂಕ : **19-9-2024, ಗುರುವಾರ**
ಸಮಯ : **ಸಂಜೆ 7.30ಕ್ಕೆ**
ಅತಿಥಿ : **ಡಾ. ಹರಿಪ್ರಸಾದ್**
ಹಿರಿಯ ಉಪನ್ಯಾಸಕರು, ಡಯಟ್, ಶಿವಮೊಗ್ಗ
ವಿಷಯ : **ಶಿಕ್ಷಣದಲ್ಲಿ ನಾವೀನ್ಯತೆ**










13.09.2024 - 2nd Zonal Review Meeting @ Riverside. Our club representatives - President Suresh Kumar D, Secretary Faheem Hussain and Community Service Director Veena Suresh attended.

## ROTARY INFORMATION

### EXCHANGE OF CLUB BANNERS



**Rtn. Ragupathi S.**

One of the colorful traditions of many Rotary clubs is the exchange of small banners, flags or pennants. Rotarians traveling to distant locations often take banners to exchange at "make up" meetings as a token of friendship. Many clubs use the decorative banners they have received for attractive displays at club meetings and district events.

The Rotary International board recognized the growing popularity of the banner exchange back in 1959 and suggested that those clubs which participate in such exchanges give careful thought to the design of their banners in order that they be distinctive and expressive of the community and country of which the club is a part. It is recommended that banners include pictures, slogans or designs which portray the territorial area of the club.

Exchanging club banners is a very pleasant custom, especially when a creative and artistic banner tells an interesting story of community pride. The exchange of banners is a significant tradition of Rotary and serves as tangible symbol of our international fellowship.



23-8-2024 : On behalf of ROTARY MIDTOWN CLUB workshop completed for 1PUC Commerce students at Holalur. Resource person Rtn. Santhosh S.S.




26-8-2024 : Conducted a programme on awareness of POCSO ACT and effects of child marriage. Organised by Martuthi Interact Club, Holalur

### 4 WAY TEST

**of the things we think, say or do :**

1. Is it the **TRUTH?**
2. Is it **FAIR** to all concerned?
3. Will it build **GOODWILL** and **BETTER FRIENDSHIPS**?
4. Will it be **BENEFICIAL** to all concerned?

**Donate Blood and Save Lives**

**Donate Eyes and Give Sight**

Printed at : A.S.R. Offset Printers, #4, Dargah Complex, Tilak Nagar Main Road, SHIMOGA-577201, Ph : 278764